ಮೂಲ ದಾವಾ ಸಂಖ್ಯೆ 56/2020

ಪಿ ಡಬ್ಲ್ಯೂ-4

**(ದಿನಾಂಕ 08.04.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.)**

**ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಎಸ್ ಜಿ ಟಿ ವಕೀಲರಿಂದಃ-**

ವಾದಿ ಪ್ರತಿವಾದಿಯರು ಯಾರು ಅಂತಾ ನನಗೆ ಹೇಳಲು ಆಗುವುದಿಲ್ಲಾ. ಸಾಕ್ಷಿ ಹೇಳಲು ನನಗೆ ನಾಗರಾಜ ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿ. ಸಾಕ್ಷಿ ಪ್ರಮಾಣ ಪತ್ರವನ್ನು ಬರೆಯಲು ನಾನೇ ಕೊಟ್ಟಿರುತ್ತೇನೆ. ಹೊಲದ ಬಗ್ಗೆ ಮಾಹಿತಿ ಕೊಟ್ಟಿರುತ್ತೇನೆ. ಹೊಲದ ಸರ್ವೆ ನಂಬರ ಗೊತ್ತಿಲ್ಲಾ. ರುದ್ರಮ್ಮನ ಜಮೀನನ್ನು ಅನಿತಮ್ಮ ಖರೀದಿ ಮಾಡಿರುತ್ತಾರೆ. ಹೊಲದ ವ್ಯವಹಾರ ದಾವಣಗೆರೆಯಲ್ಲಿ ಆಗಿರುತ್ತದೆ. ಅನಿತಮ್ಮ ಖರೀದಿ ಮಾಡಿರುತ್ತಾರೆ. ಎಷ್ಟು ಮೊತ್ತಕ್ಕೆ ಮಾರಾಟ ಆಗಿರುತ್ತದೆ ಎಂದರೆ 6 ಲಕ್ಷ ರೂಗಳಿಗೆ ಮಾರಾಟ ಆಗಿರುತ್ತದೆ. ಎಕರೆಗೆ 25 ರಿಂದ 30 ಲಕ್ಷ ಬೆಲೆ ಮಾತುಕತೆ ಆಗಿರುತ್ತದೆ. 4 ಎಕರೆ ಖರೀದಿ ಆಗಿರುತ್ತದೆ. ದಾವಾ ಆಸ್ತಿ ರುದ್ರಮ್ಮನ ನೀರಾವರಿ ಜಮೀನು. ನಾನು ಹೇಳುವ ಮೊತ್ತಕ್ಕೆ 1 ಕೋಟಿ ರೂ ಖರೀದಿ ಮೊತ್ತ ಆಗುತ್ತದೆ ಎಂದರೆ ಸರಿ. ಅಷ್ಟು ಮೊತ್ತದ ಆಸ್ತಿಯನ್ನು 6 ಲಕ್ಷ ರೂಗಳಿಗೆ ಖರೀದಿ ಕರಾರು ಬರೆದು ಮೋಸ ದಿಂದ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಬೆಲೆ ಬಾಳುವ ಆಸ್ತಿಯನ್ನು ಕಡಿಮೆ ಬೆಲೆಗೆ ಮಾರಾಟ ಮಾಡುವುದಿಲ್ಲಾ ಎಂದರೆ ಸಮಯ ಬಂದರೆ ಕೊಡುತ್ತಾರೆ. ಏನು ಸಮಸ್ಯೆ ಇತ್ತು ಅಂತಾ ನಾನು ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆಸಿರುವುದಿಲ್ಲಾ. ಈ ಕೇಸನ್ನು 2020 ರಲ್ಲಿ ದಾಖಲಿಸಿರುತ್ತಾರೆ ಎಂದರೆ ಸರಿ. 2020 ರಲ್ಲಿ ರವಿಗೌಡ ಒಬ್ಬರೇ ಸಾಕ್ಷಿ ಮಾಡಿಸಿದ್ದರು ಎಂದರೆ ಸರಿ. ನಾನು ಈಗ ಸಾಕ್ಷಿ ನುಡಿಯುತ್ತಿದ್ದೇನೆ. ರವಿಗೌಡ ಮತ್ತು ನಾಗರಾಜ ಒಂದೇ ಕುಲಸ್ಥರು ಎಂದರೆ ಸರಿ. ಕೇವಲ ರವಿಗೌಡ ಒಬ್ಬರನ್ನೇ ಸಾಕ್ಷಿ ಮಾಡಿಸಿ ಪತ್ರವನ್ನು ಮಾಡಿಸಿಕೊಳ್ಳಲು ಹೊರಟರು ಎಂದರೆ ಸರಿ. ನಾಗರಾಜಪ್ಪನ ಮಾತಿನ ಮೇರೆಗೆ ಸುಳ್ಳು ಸಾಕ್ಷಿ ಪ್ರಮಾಣ ಪತ್ರವನ್ನು

ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕ್ರಯ ಕರಾರು ಪತ್ರದಲ್ಲಿ ಎಷ್ಟು ತಿಂಗಳಲ್ಲಿ ಖರೀದಿ ಪತ್ರವನ್ನು ಮಾಡಿಸಿಕೊಳ್ಳಬೇಕು ಅಂತಾ ನನಗೆ ಗೊತ್ತಿರುವುದಿಲ್ಲ. ನನ್ನೊಂದಿಗೆ ಸಾಕ್ಷಿದಾರರಾಗಿ ಬಿಳಿಚೋಡು ರಂಗಪ್ಪ ರುದ್ರಪ್ಪ ನಾಗಪ್ಪ ಹಾಜರಿದ್ದರು ಎಂದರೆ ಸರಿ. ನಾಗರಾಜಪ್ಪ ಎಂದರೆ ಜಿ ಪಿ ಎ ದಾರ ಎಂದರೆ ಸರಿ. ನಾಗರಾಜಪ್ಪ ಕೂಡ ಹಾಜರಿದ್ದರು ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ:-

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ.